ದಿನಾಂಕ 14-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ1, 4 ರಿಂದ 7 ಮತ್ತು 9 ನೇ ಪ್ರತಿವಾದಿಗಳ ಪರ ಶ್ರೀ ಎಂ.ಹೆಚ್.ಎಂ ವಕೀಲರಿಂದಃ</u>**

1. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಈ ದಾವೆಯನ್ನು ಹಿಸ್ಸೇ ಕೋರಿ ಸಲ್ಲಿಸಿರುತ್ತೇನೆ. ವಾದ ಪತ್ರದಲ್ಲಿ ಇರುವ ಸಂಗತಿಗಳನ್ನು ನಾನು ಮತ್ತು ನನ್ನ ತಂದೆ ಮಾಹಿತಿ ನೀಡಿ ಬರೆಸಿದ್ದೇವೆ. ನನಗೆ 39 ವರ್ಷ ವಯಸ್ಸು. ವಾದಿ 1(ಡಿ) ಮತ್ತು 1(ಇ) ನಾನೇ ಆಗಿರುತ್ತೇನೆ. ನನಗೆ ಮಲ್ಲಿಕಾರ್ಜುನ ಎಂಬ ಕಿರಿಯ ಸಹೋದರ ಇದ್ದಾನೆ ಎಂದರೆ ಸರಿ. ಆತನನ್ನು ಈ ದಾವೆಯಲ್ಲಿ ಪಕ್ಷಕಾರರಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

2.ಮೂಲಪುರುಷ ಗೂರಾಣಪ್ಪ ನನ್ನ ಅಜ್ಜ. ಸದರಿ ಗೂರಾಣಪ್ಪ ರವರಿಗೆ 6 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. ಹಿರಿಯವ್ವ ರವರು ಮೂಲ ಪುರುಷನ ಒಬ್ಬಳೇ ಮಗಳು ಎಂದರೆ ಸರಿ. ಆಕೆಯು ಮರಣ ಹೊಂದಿರುತ್ತಾಳೆ. ಸದರಿ ಮೃತ ಹಿರಿಯವ್ವ ರವರಿಗೆ 4 ಜನ ಹೆಣ್ಣು ಮಕ್ಕಳು ಇರುತ್ತಾರೆ. ಆಕೆಯ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಕಾರರಾಗಿ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು, ಹಿರಿಯವ್ವ ರವರ ಹೆಣ್ಣು ಮಕ್ಕಳಿಗೆ ಈಗಾಗಲೇ ಒಳ್ಳೇಯ ಸಂಬಂಧಗಳಿಗೆ ಮದುವೆ ಮಾಡಿಕೊಟ್ಟು ಬಂಗಾರ ಮತ್ತು ಹಣವನ್ನು ನೀಡಿರುವುದರಿಂದ ಅವರಿಗೆ ಹಿಸ್ಸೇ ಹಕ್ಕು ಇಲ್ಲದೇ ಇರುವ ಕಾರಣಕ್ಕೆ ಪಕ್ಷಕಾರರಾಗಿ ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ.

3. ಈ ದಾವೆಯನ್ನು ಮೊದಲಿಗೆ ನನ್ನ ತಂದೆ ವೀರಭದ್ರಪ್ಪ ದಾಖಲಿಸಿದ್ದು, ಅವರು ಈ ದಾವೆಯು ಚಾಲ್ತಿಯಲ್ಲಿದ್ದಾಗ ಮರಣ ಹೊಂದಿರುತ್ತಾರೆ. ಡ ಸಂಃ 678 ರ ಪ್ರಕಾರ ನನ್ನ ತಂದೆಗೆ ಈಗಾಗಲೇ ಬರಬೇಕಾದ ಹಿಸ್ಸೇಯ ಆಸ್ತಿಗಳು ಬಂದಿದ್ದು, ಅದರ ನಮೂದಿನ ಪ್ರಕಾರ ಮೃತ ತಂದೆ ಉಳಿದ ಕುಟುಂಬದ ಜಮೀನಿನಲ್ಲಿ ತನ್ನ ಹಕ್ಕನ್ನು ಬಿಟ್ಟು ಕೊಟ್ಟಿರುತ್ತಾನೆ ಎಂದರೆ

ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಡ ಸಂಖ್ಯೆಯ ಮಂಜೂರು ಖೊಟ್ಟಿಯಿಂದ ಕೂಡಿರುತ್ತದೆ ಎಂದು ನುಡಿಯುತ್ತಾರೆ. ಡ ಸಂಃ 678, 1984 ರಲ್ಲಿ ಮಂಜೂರು ಆಗಿರುತ್ತದೆ ಎಂದರೆ ಸರಿ. ಸದರಿ ಮಂಜೂರನ್ನು 1984 ರಿಂದಲೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ರತಿವಾದಿಗಳನ್ನು ದಾವಾ ಆಸ್ತಿಗಳಲ್ಲಿ ಹಿಸ್ಸೇಯನ್ನು ಕೊಡುವಂತೆ ಅಂದಿನಿಂದಲೂ ಕೇಳುತ್ತಾ ಬಂದಿದ್ದು, ಅವರು ಇಂದು ಕೊಡುತ್ತೇನೆ ಅಥವಾ ನಾಳೆ ಕೊಡುತ್ತೇನೆ ಎಂದು ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಗೆ ಕುಟುಂಬದ ಬೇರೆ ಆಸ್ತಿಗಳಲ್ಲಿ ಹಿಸ್ಸೇಯು ಬಂದಿರುವುದರಿಂದ ಡ ಸಂಃ678 ರ ಮಂಜೂರನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ನನ್ನ ತಂದೆ ಮೃತ ವೀರಭದ್ರಪ್ಪ ರವರಿಗೆ ಶಂಕ್ರಿಕೊಪ್ಪ ಗ್ರಾಮದ ಸ ನಂಃ 88/3 ಅ ವಿಸ್ತೀರ್ಣ 1 ಎಕರೆ 14 ಗುಂಟೆ, ಸ ನಂಃ 24 ರಲ್ಲಿ 29 ಗುಂಟೆ 5 ಆಣೆ ಜಮೀನುಗಳು ನನ್ನ ತಂದೆಯ ಹಿಸ್ಸೇಗೆ ಬಂದಿರುತ್ತವೆ ಎಂದರೆ ಸರಿ. ಅದೇ ರೀತಿ ಶಂಕ್ರಿಕೊಪ್ಪ ಗ್ರಾಮದ 1 ಗುಂಟೆ ಪ್ಲಾಟು ಸಹ ನನ್ನ ಮೃತ ತಂದೆ ಹಿಸ್ಸೇಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಸದರಿ 1 ಗುಂಟೆ ಪ್ಲಾಟು ನನ್ನ ಅಜ್ಜ ನನ್ನ ತಂದೆಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 1 ಗುಂಟೆ ಪ್ಲಾಟು ಒಟ್ಟು ಕುಟುಂಬದ ಆಸ್ತಿಯಾಗಿದ್ದು, ಅದನ್ನು ನನ್ನ ಅಜ್ಜ ಬಿಟ್ಟುಕೊಟ್ಟಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಡ ಸಂಃ 678 ರ ಪ್ರಕಾರ 1984 ರಲ್ಲಿಯೇ ದಾವಾ ಆಸ್ತಿಯು ಪ್ರತಿವಾದಿಗಳ ಹಿಸ್ಸೇಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಡ ಮಂಜೂರಿ ಪ್ರಕಾರ ಬಂದ ದಾವಾ ಆಸ್ತಿಯನ್ನು ಪ್ರತಿವಾದಿಗಳು ದಿಃ 15-10-2014 ರಂದು ನೋಂದಾಯಿತ ವಿಭಾಗ ಪತ್ರದ ಪ್ರಕಾರ ಹಿಸ್ಸೇ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ವಾದಿಯರನ್ನು ಬಿಟ್ಟು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮೃತ ತಂದೆ ವೀರಭದ್ರಪ್ಪ ರವರು ತಮ್ಮ ಹಿಸ್ಸೇಗೆ ಬಂದಿದ್ದ ಸ ನಂಃ 24 ವಿಸ್ತೀರ್ಣ 29 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಮೂಲ ಸ ನಂಃ 88 ರ ಒಟ್ಟು ಜಮೀನಿನ ಪೈಕಿ 1 ಎಕರೆ

ಜಮೀನನ್ನು ನನ್ನ ತಂದೆ ಜೀವಿತಾವಧಿ ಯಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ